**SC No. 110/20217**
**PW-38**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 110/2017**

| | | |
|---|---|---|
| ಸಾಕ್ಷಿದಾರರ ಹೆಸರು | ಶೇಖರ್ ನಾಯಕ್ | ಪ್ರಮಾಣ ವಚನ ಮಾಡಿದ ದಿನಾಂಕ: 03.12.2025 |
| ತಂದೆಯ/ಗಂಡನ ಹೆಸರು | ಪುಟ್ಟ ಮಂಚನಾಯಕ | |
| ವಯಸ್ಸು | 37 ವರ್ಷ | |
| ವೃತ್ತಿ | ಫ್ಯಾಕ್ಟರಿ ಕೆಲಸ | ಪ್ರಾ.ಸಾಃ 38 |
| ವಾಸ ಸ್ಥಳ | ಪಡುವಾರಹಳ್ಳಿ ಮೈಸೂರು | ಚಾ.ಸಾಃ 57 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಸಿದ್ದಮ್ಮ ನನಗೆ ತಾಯಿಯಾಗಬೇಕು. ಮಂಜುನಾಯಕ್ ಎಂದರೆ ನನ್ನ ಅಣ್ಣ. ನಾನು ಫ್ಯಾಕ್ಟರಿಯಲ್ಲಿ CNC programme ಮಾಡುತ್ತೇನೆ. ನನ್ನ ಫ್ಯಾಕ್ಟರಿ ಹೆಸರು S.S. Industries. ನಾನು ಕಳೆದ 12 ವರ್ಷಗಳಿಂದ S.S. Industries ನಲ್ಲಿ system operator ಆಗಿ ಕೆಲಸ ಮಾಡಿಕೊಂಡಿರುತ್ತೇನೆ. ರವಿಕುಮಾರ್ ನನ್ನ ಸ್ನೇಹಿತರು ಇರುತ್ತಾರೆ. ನಾನು ಈಗ ವಿಸಿ ಮೂಲಕ ನೋಡುತ್ತಿರುವ ಆರೋಪಿ ಮಂಜೇಶ್ ಗೊತ್ತಿರುವುದಿಲ್ಲ. ನನ್ನ ಫೋನ್ ನಂಬರ್ 9113525828 ಇರುತ್ತದೆ. ಈ ನಂಬರ್ ಅಲ್ಲದೇ ಮತ್ತೊಂದು ನನ್ನ ಫೋನ್ ನಂಬರ್ 9035121706 ಇರುತ್ತದೆ. ಈ ಎರಡೂ ಸಿಮ್ ಗಳು ನನ್ನ ಹೆಸರಿನಲ್ಲಿ ಇರುತ್ತವೆ. ಫೋನ್ ನಂಬರ್ 9035121706 ಅನ್ನು ಕಳೆದ 12-13 ವರ್ಷಗಳಿಂದ ಬಳಸುತ್ತಿದ್ದೇನೆ.

ಫೋನ್ ನಂಬರ್ 918123907706 ಯಾರದು ಅಂತ ನನಗೆ ಗೊತ್ತಿರುವುದಿಲ್ಲ. ಈ ನಂಬರ್ ನಿಂದ ನನ್ನ ಮೊಬೈಲ್ ನಂಬರ್ ಗಳಿಗೆ ಯಾವುದೇ ಕರೆ ಬಂದಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು. ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದರು ಮತ್ತು ಆರೋಪಿ ಮಂಜೇಶ್ ನಿಂದ ನಿನಗೆ ಫೋನ್ ಬಂದಿತ್ತಾ ಎಂದು ಕೇಳಿದರು ಅದಕ್ಕೆ ನಾನು ಬಂದಿರುವುದಿಲ್ಲ ಎಂದು ಹೇಳಿದ್ದೆ. ಪೊಲೀಸರು ನನ್ನ ಹೇಳಿಕೆಯನ್ನು ಮಾಡಿಕೊಂಡಿದ್ದರು. ಪುನಃ ನಾನು ಪೊಲೀಸ್ ಠಾಣೆಗೆ ಹೋಗಿರಲಿಲ್ಲ.

ನಾನು ಪೊಲೀಸ್ ಠಾಣೆಗೆ ಹೋಗಿದ್ದ 4–5 ತಿಂಗಳ ನಂತರ ನ್ಯಾಯಾಧೀಶರ ಕಡೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಅಲ್ಲಿ ಫೋನ್ ಮಾಡಿದ್ದರ ವಿಚಾರವಾಗಿ ನನ್ನನ್ನು ಕೇಳಿದ್ದರು ನಾನು ಫೋನ್ ಮಾಡಿರುವುದಿಲ್ಲ ಅಂತ ಹೇಳಿದ್ದೆ. ನಾನು ನನ್ನ ಸಹಿ  ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.127 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ.127(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಮಂಜೇಶ ನನಗೆ  ಕಸಿನ್ ಬ್ರದರ್ ಇರುತ್ತಾರೆ ಎಂದರೆ ಸರಿಯಲ್ಲ.  ನಾನು ಮೊಬೈಲ್ ನಂಬರ್ 9035121706 ಇದನ್ನು ನನ್ನ ಸಂಬಂಧಿ ರವಿಕುಮಾರ್ ಎಂಬವರ ಅಡ್ರೆಸ್ ಪ್ರೂಫ್

ಕೊಟ್ಟು ಖರೀದಿ ಮಾಡಿದ್ದೆ ಎಂದರೆ ಸರಿ. 2010 ನೇ ಇಸವಿಯಲ್ಲಿ ಕರಿಯಪ್ಪನ ಕೊಲೆ ಪ್ರಕರಣದಲ್ಲಿ ಮಂಜೇಶ ಜೈಲಿಗೆ ಹೋಗಿದ್ದ ಆ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. 2015 ನೇ ಇಸವಿಯಲ್ಲಿ ಪಡುವಾರಹಳ್ಳಿಯ ರಾಘವೇಂದ್ರ ಅಲಿಯಾಸ್ ಲಲ್ಲು ಈತನ ಕೊಲೆ ಪ್ರಕರಣದಲ್ಲಿಯೂ ಸಹ ಮಂಜೇಶ ಜೈಲಿಗೆ ಹೋಗಿ ಜೈಲಿನಲ್ಲಿ ಇದ್ದ ಆ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. 2017 ಜನವರಿಗಿಂತ ಪೂರ್ವದಲ್ಲಿ 5-6 ತಿಂಗಳಿಂದ ಆರೋಪಿ ಮಂಜೇಶ ಮೈಸೂರಿನ ಜೈಲಿನಲ್ಲಿ ಇದ್ದು ಫೋನ್ ನಂಬರ್ 918123907706 ಈ ನಂಬರ್ ನಿಂದ ನನ್ನ ಫೋನ್ ನಂಬರ್ 9035121706 ಗೆ ಕರೆ ಮಾಡಿ ವಿಚಾರ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಾನು ಮಂಜೇಶ ನಿಗೆ ನೀನು ಎಲ್ಲಿಂದ ಫೋನ್ ಮಾಡುತ್ತಿದ್ದೀಯಾ ಎಂದು ಕೇಳಿದ್ದೆ ಅದಕ್ಕೆ ತಾನು ಮೈಸೂರಿನ ಜೈಲಿನಿಂದ ಸ್ನೇಹಿತರೊಬ್ಬರ ಮೊಬೈಲ್ ನಿಂದ ಫೋನ್ ಮಾಡುತ್ತಿದ್ದೇನೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ದಿನಾಂಕ 11.01.2017 ರಂದು ನಾನು ವಿವಿ ಪುರಂ ಪೊಲೀಸ್ ಠಾಣೆಗೆ ಹೋಗಿದ್ದೆ ಎಂದರೆ ಸರಿ. ಆ ವೇಳೆಯಲ್ಲಿ ಆರೋಪಿ ಮಂಜೇಶ ಪೊಲೀಸರ ವಶದಲ್ಲಿ ಇದ್ದ ನಾನು ಆತನನ್ನು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಆರೋಪಿ ಮಂಜೇಶ ಜೈಲಿನಿಂದ ನನಗೆ ಫೋನ್ ಮಾಡುತ್ತಿದ್ದ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದ **ನಿಪಿ-128** ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಿನಾಂಕ 19.01.2017 ರಲ್ಲಿ ಮೈಸೂರಿನ ನ್ಯಾಯಾಲಯದಲ್ಲಿ ಸ್ವ ಇಚ್ಚೆಯಿಂದ ನಾನು ಹೇಳಿದ ಹೇಳಿಕೆಯನ್ನು ನ್ಯಾಯಾಧೀಶರು ಪಡೆದುಕೊಂಡಿದ್ದರು ಎಂದರೆ ಪೊಲೀಸರು ಹೇಳಿದ್ದರಿಂದ ಹೇಳಿದ್ದೆ. ನಾನು ಯಾರದೇ ಒತ್ತಡಕ್ಕೆ ಮಣಿಯದೇ ಸ್ವ ಇಚ್ಚೆಯಿಂದ

ಹೇಳಿಕೆ ನೀಡುತ್ತಿದ್ದೇನೆ ಎನ್ನುವ ಬಗ್ಗೆ ಕಾತರಿ ಮಾಡಿಕೊಂಡು ನಾನು ಕೊಟ್ಟಂತಹ ಹೇಳಿಕೆಯ ಪ್ರಕಾರ ನಿಪಿ–127 ರಂತೆ ಹೇಳಿಕೆಯನ್ನು ನ್ಯಾಯಾಧೀಶರು ಬೆರಳಚ್ಚು ಮಾಡಿಸಿದ್ದರು ಎಂದರೆ ಸರಿಯಲ್ಲ. ನಾನು ಪೊಲೀಸರು ಹೇಳಿ ಕೊಟ್ಟ ರೀತಿಯಲ್ಲಿ ಹೇಳಿರುವುದಿಲ್ಲ ನಾನು ಸ್ವ ಇಚ್ಚೆಯಿಂದ ಹೇಳಿದ್ದೇನೆ ಎಂದರೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮುಂದೆ ಮತ್ತು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರ ಭಯದಿಂದ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**